COMPT/LOK/BD/1698/2021/P.O./A.R.E.17

# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಲೋಕ್/ಬಿಡಿ/1698/2021
ಮಂಡನಾಧಿಕಾರಿಗಳ ಶಾಖೆ ಎ.ಆರ್.ಇ.17

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 09/01/2023
12/1/23.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸಾರ್ವಜನಿಕ ನೌಕರರಾದ ಶ್ರೀ ಪ್ರದೀಪ್ ಎಂ.ಆರ್. ಬಿನ್ ಮೇಘರಾಜ್, ನರಸಾಪುರ ಗ್ರಾಮ ಪಂಚಾಯ್ತಿ ಅಧ್ಯಕ್ಷರು, ತಾಲ್ಲೂಕು ಮತ್ತು ಜಿಲ್ಲೆ ಶಿವಮೊಗ್ಗ ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೋಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಶಿವಮೊಗ್ಗ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಶ್ರೀ ಪ್ರದೀಪ್ ಎಂ.ಆರ್. ಬಿನ್ ಮೇಘರಾಜ್, ನರಸಾಪುರ ಗ್ರಾಮ ಪಂಚಾಯ್ತಿ ಅಧ್ಯಕ್ಷರು, ತಾಲ್ಲೂಕು ಮತ್ತು ಜಿಲ್ಲೆ ಶಿವಮೊಗ್ಗ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು ಶ್ರೀ ಸಿ.ಆರ್. ವೀರೇಶ್ ಬಿನ್ ರುದ್ರಪ್ಪ, ಕಂಟ್ರಾಕ್ಟರ್, ವಾಸ: ಕಣಸೋಗಿ ಗ್ರಾಮ, ನರಸಾಪುರ ಗ್ರಾಮ ಪಂಚಾಯಿತಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಲೋಕಾಯುಕ್ತರವರು ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) **<u>ದೂರಿನ ಸಂಕ್ಷಿಪ್ತ ವಿವರಣೆ:-</u>** ದೂರುದಾರರು ನರಸಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಣಸೋಗಿ ಗ್ರಾಮದಲ್ಲಿ ಮರಡೇರ ಶಂಕರಪ್ಪರವರ ಮನೆಯಿಂದ ಕಲ್ಮನೆ ಗೋವಿಂದಪ್ಪರವರ ಮನೆಯವರೆಗೆ ಎಂ.ಜಿ.ಎನ್.ಆರ್.ಇ.ಜಿ. ಯೋಜನೆಯಲ್ಲಿ ರೂ. 5 ಲಕ್ಷದ ಕಾಂಕ್ರೀಟ್ ರಸ್ತೆಯನ್ನು ಮಾಡಿಸಿದ್ದು ಸದರಿ ಕಾಮಗಾರಿಯನ್ನು ಮುಗಿಸಿ ಒಂದು ವರ್ಷ ಕಳೆದಿದ್ದು, ಅದರಲ್ಲಿ ರೂ. 1 ಲಕ್ಷ ಹಣ ಎನ್ ಎಂ.ಆರ್. ಪೇಮೆಂಟ್ ಆಗಿರುತ್ತದೆ. ಸದರಿ ಕಾಮಗಾರಿ ಬಗ್ಗೆ ಹಣ ಬಂದಿದ್ದು ಉಳಿದ ಹಣ ರೂ. 4 ಲಕ್ಷದ ಹಣಕ್ಕೆ 5% ರಂತೆ ಒಟ್ಟು ರೂ. 20,000/- ಗಳ ಲಂಚದ ಹಣಕ್ಕಾಗಿ ಎದುರುದಾರರು ಒತ್ತಾಯಿಸಿರುತ್ತಾರೆ. ದೂರುದಾರರಿಗೆ ಸದರಿ ಲಂಚದ ಹಣ ನೀಡಲು ಇಷ್ಟವಿಲ್ಲದ ಕಾರಣ, ದೂರುದಾರರು ಶಿವಮೊಗ್ಗ ಜಿಲ್ಲೆ ಎ.ಸಿ.ಬಿ. ಪೊಲೀಸ್ ಠಾಣೆಗೆ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು 14/06/2018 ರಂದು ನೀಡಿರುತ್ತಾರೆ. ಈ ಬಗ್ಗೆ ಶಿವಮೊಗ್ಗ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 09/2018 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 14/06/2018 ರಂದು ಪಂಚರನ್ನು ಠಾಣೆಗೆ ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ಅವರಿಂದ ದೂರಿನ ವಿಷಯವನ್ನು ಕೇಳಿ ತಿಳಿದ ನಂತರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ, ಅದನ್ನು ಲಿಪಿಕರಣ ಮಾಡಿ, ಎರಡು ಸಿ.ಡಿ.ಗಳಿಗೆ ವರ್ಗಾಯಿಸಿರುತ್ತಾರೆ.

4) ದೂರುದಾರರು ಲಂಚದ ಹಣ ರೂ. 20,000/- (2,000/- ರೂಪಾಯಿಯ 10 ನೋಟುಗಳು) ಗಳನ್ನು ಹಾಜರುಪಡಿಸಿದ್ದು, ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆಗಳನ್ನು ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ, ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಸಿಬ್ಬಂದಿ ಶ್ರೀ ಯೋಗೇಶ್ ರವರುಫಿನಾಫ್ತಲಿನ್ ಪೌಡರ್‌ನ್ನು ಲೇಪಿಸಿ, ಸದರಿ ನೋಟುಗಳನ್ನು ಸಹ-ಪಂಚ ಶ್ರೀ ವಿ. ಪ್ರಭಾಕರ ರವರಿಗೆ ನೀಡಿದ್ದು, ಸದರಿಯವರು ತಮ್ಮ ಬಲಗೈಯಿಂದ ತೆಗೆದುಕೊಂಡು ಎರಡೂ ಕೈಗಳಿಂದ ಎಣಿಸಿ ಆ ನೋಟುಗಳನ್ನು ದೂರುದಾರರಾದ ಶ್ರೀ ವೀರೇಶ್ ರವರು ಧರಿಸಿದ್ದ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಸದರಿ ದ್ರಾವಣದಲ್ಲಿ ಸಹ ಪಂಚ ಶ್ರೀ ವಿ. ಪ್ರಭಾಕರ ರವರ ಎರಡೂ ಹಸ್ತಗಳನ್ನು ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣಗಳನ್ನು

ಪ್ರತ್ಯೇಕವಾಗಿ ವಶಪಡಿಸಿಕೊಂಡು, ಹಂತ ಹಂತವಾಗಿ ಫೋಟೋಗಳನ್ನು ತೆಗೆದಿರುತ್ತಾರೆ.

5) ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಎಲ್ಲರಿಗೂ ಸೂಚಿಸಿರುತ್ತಾರೆ. ಸಂಭಾಷಣೆಯ ಸಿ.ಡಿ.ಗಳನ್ನು ವಶಪಡಿಸಿ ಕೊಂಡಿರುತ್ತಾರೆ. ಶ್ರೀ ವಿಜಯಕುಮಾರ್ ಬಿ. ಟಿ. ಬಿನ್ ತಿಪ್ಪಯ್ಯ, ಎಫ್. ಡಿ. ಎ. ಮೆಗ್ಗಾನ್ ಆಸ್ಪತ್ರೆ, ಶಿವಮೊಗ್ಗ ಇವರನ್ನು ನೆರಳು ಸಾಕ್ಷಿಯಾಗಿ ತನಿಖಾಧಿಕಾರಿಗಳು ನೇಮಿಸಿರುತ್ತಾರೆ. ಸದರಿಯವರಿಗೆ ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ, ಅನುಮಾನ ಬಾರದಂತೆ ಮತ್ತು ಎದುರುದಾರ ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು, ಘಟನೆಯನ್ನು ವೀಕ್ಷಿಸಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ, ನಂತರ ತಿಳಿಸಬೇಕೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ದೂರುದಾರರಿಗೆ ಮೊಬೈಲ್ ನಲ್ಲಿ ದೂರುದಾರರ ಮತ್ತು ಎದುರುದಾರರ ಮಧ್ಯೆ ನಡೆಯುವ ಧ್ವನಿ ಸಂಭಾಷಣೆಯನ್ನು ಮುದ್ರಣ ಮಾಡಿಕೊಳ್ಳಲು ಸೂಚಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ಕೈಯಿಂದ ಮುಖವನ್ನು ಒರೆಸಿಕೊಳ್ಳುವುದರ ಮೂಲಕ ಸಂಜ್ಞೆ ನೀಡಬೇಕೆಂದು ತನಿಖಾಧಿಕಾರಿಗಳು ಸೂಚಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ಮಧ್ಯಾಹ್ನ 01-55 ರಿಂದ 3-00 ಘಂಟೆಯವರೆಗೆ ಠಾಣೆಯಲ್ಲಿ ನಿರ್ವಹಿಸಿರುತ್ತಾರೆ.

6) ದಿನಾಂಕ 14/06/2018 ರಂದು ಮಧ್ಯಾಹ್ನ 3-20 ಘಂಟೆ ಸಮಯದಲ್ಲಿ ಎರಡು ವಾಹನಗಳಲ್ಲಿ ದೂರುದಾರರು, ನೆರಳು ಸಾಕ್ಷಿ, ಸಹ ಪಂಚರವರು ಹಾಗೂ ತನಿಖಾಧಿಕಾರಿ ಮತ್ತು ಸಿಬ್ಬಂದಿಯವರು ಶಿವಮೊಗ್ಗ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯಿಂದ ಹೊರಟು ನರಸಾಪುರ ಗ್ರಾಮ ಪಂಚಾಯತಿಯ ಸ್ವಲ್ಪ ಹಿಂದೆ ಪ್ರಾಥಮಿಕ ಶಾಲೆಯ ಹತ್ತಿರ ವಾಹನ ನಿಲ್ಲಿಸಿದಾಗ ಸಂಜೆ 4-50 ಘಂಟೆಯಾಗಿತ್ತು. ನಂತರ ದೂರುದಾರರು ಹಾಗೂ ನೆರಳು ಸಾಕ್ಷಿ ಶ್ರೀ ವಿಜಯಕುಮಾರ ಇವರು ಕಾಲುನಡಿಗೆಯಲ್ಲಿ ನರಸಾಪುರ ಗ್ರಾಮ ಪಂಚಾಯತಿಯ ಒಳಗೆ ಹೋಗಿ ಸ್ವಲ್ಪ ಸಮಯದ ನಂತರ ವಾಪಸ್ ಬಂದಿದ್ದು ಗ್ರಾಮಪಂಚಾಯತಿಯಲ್ಲಿ ಯಾರೂ ಇಲ್ಲವೆಂದು ತಿಳಿಸಿರುತ್ತಾರೆ.

7) ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಫೋನ್ ಮಾಡುವಂತೆ ತಿಳಿಸಿದ್ದರಿಂದ ದೂರುದಾರರು ಎದುರುದಾರರಿಗೆ ಫೋನ್ ಮಾಡಿ ಕೇಳಿದಾಗ ಎದುರುದಾರರು ತಮ್ಮ ಮನೆಯಲ್ಲಿಯೇ ಇರುವುದಾಗಿ ಮತ್ತು ಮನೆಗೆ ಬರುವಂತೆ ಹೇಳಿರುತ್ತಾರೆ ಎಂದು ತನಿಖಾಧಿಕಾರಿಯವರಿಗೆ ತಿಳಿಸಿರುತ್ತಾರೆ. ನಂತರ ದೂರುದಾರರು ಹಾಗೂ ನೆರಳು ಸಾಕ್ಷಿ ಎದುರುದಾರರ ಮನೆಗೆ ಹೋದಾಗ ಸಾಯಂಕಾಲ 5-05 ಘಂಟೆ ಆಗಿತ್ತು. ತನಿಖಾಧಿಕಾರಿ, ಸಿಬ್ಬಂದಿ ಹಾಗೂ ಸಹ ಪಂಚ ಎದುರುದಾರರ ಮನೆಯ ಹತ್ತಿರ ಅಂತರದಲ್ಲಿ ನಿಂತುಕೊಂಡು ದೂರುದಾರರ ಸಂಜ್ಞೆಗಾಗಿ ಕಾಯುತ್ತಾ ನಿಂತಿರುತ್ತಾರೆ. ಸ್ವಲ್ಪ ಸಮಯದ ನಂತರ ದೂರುದಾರರು ಮನೆಯಿಂದ ಹೊರಗೆ ಬಂದು ತಮ್ಮ ಮುಖವನ್ನು ಒರೆಸಿಕೊಳ್ಳುವುದರ ಮೂಲಕ ತನಿಖಾಧಿಕಾರಿಯವರಿಗೆ ಸಂಜ್ಞೆ ನೀಡಿರುತ್ತಾರೆ. ಆಗ ಸಮಯ ಸಾಯಂಕಾಲ 5-15 ಘಂಟೆ ಆಗಿರುತ್ತದೆ.

8) ನಂತರ ತನಿಖಾಧಿಕಾರಿಗಳು ಸಹ ಪಂಚ ಹಾಗೂ ಸಿಬ್ಬಂದಿಯವರು ಎದುರುದಾರರ ಮನೆ ಒಳಗೆ ಪ್ರವೇಶಿಸಿ ತಮ್ಮ ಹಾಗೂ ಸಿಬ್ಬಂದಿ ಮತ್ತು ಪಂಚರ ಪರಿಚಯ ಮಾಡಿಸಿ ತಮ್ಮ ಗುರುತಿನ ಚೀಟಿಯನ್ನು ತೋರಿಸಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರ ಹೆಸರು, ಹುದ್ದೆಯ ಬಗ್ಗೆ ವಿಚಾರಿಸಿ ತಿಳಿದುಕೊಂಡಿರುತ್ತಾರೆ. ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯಡಿ ದೂರು ನೀಡಿದ ಬಗ್ಗೆ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಂದ ಮತ್ತು ನೆರಳು ಸಾಕ್ಷಿರವರಿಂದ ಎದುರುದಾರರ ಮನೆಯಲ್ಲಿ ನಡೆದ ಘಟನಾವಳಿ ಬಗ್ಗೆ ಕೇಳಿ ತಿಳಿದುಕೊಂಡಿರುತ್ತಾರೆ.

9) ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಫಿನಾಫ್ತಲಿನ್ ಪುಡಿ ಸವರಿದ ನೋಟುಗಳನ್ನು ಕೇಳಿ ಪಡೆದು ತಮ್ಮ ಬಲಗೈಯಿಂದ ತೆಗೆದುಕೊಂಡು ಎಡಗೈಯಲ್ಲಿ ತಮ್ಮ ಶರ್ಟಿನ ಎಡಭಾಗದ ಮುಂಭಾಗದ ಜೇಬಿನಲ್ಲಿ ಎಡಗೈಯಿಂದ ಹಣವನ್ನು ಹಾಕಿಕೊಂಡಿರುವುದಾಗಿ ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಸೋಡಿಯಂ ಕಾರ್ಬೋನೇಟ್ ದ್ರಾವಣಗಳನ್ನು ಮೂರು ಗಾಜಿನ ಬಟ್ಟಲುಗಳಲ್ಲಿ ತಯಾರಿಸಿಕೊಂಡಿದ್ದು, ಅವು ಬಣ್ಣ ರಹಿತವಾಗಿದ್ದು ಎದುರುದಾರರ ಬಲಗೈ ಮತ್ತು ಎಡಗೈ ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಅವು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತವೆ. ಮಾದರಿ ಸೋಡಿಯಂ ಕಾರ್ಬೋನೇಟ್ ದ್ರಾವಣ ಹಾಗೂ ತಿಳಿ ಗುಲಾಬಿ ಬಣ್ಣಕ್ಕೆ ಬಂದಂತಹ ದ್ರಾವಣಗಳನ್ನು ಪ್ರತ್ಯೇಕವಾಗಿ ಗಾಜಿನ ಬಾಟಲ್‌ಗಳಲ್ಲಿ ಶೇಖರಿಸಿ ವಶ ಪಡಿಸಿಕೊಂಡಿರುತ್ತಾರೆ.

10) ಲಂಚದ ಹಣವನ್ನು ಹಾಜರುಪಡಿಸಿ ಎಂದು ಎದುರುದಾರರಿಗೆ ಕೇಳಿದಾಗ ಅವರು ಧರಿಸಿದ್ದ ಶರ್ಟಿನ ಮುಂಭಾಗದ ಎಡಭಾಗದ ಜೇಬಿನಿಂದ ನೋಟುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಪರಿಶೀಲಿಸಲಾಗಿ 2,000/- ರೂಪಾಯಿಯ 10 ನೋಟುಗಳು ಒಟ್ಟು 20,000/- ರೂಪಾಯಿಗಳಾಗಿರುತ್ತವೆ. ಸದರಿ ನೋಟುಗಳ ಸಂಖ್ಯೆ, ಮೌಲ್ಯ ಮತ್ತು ಕ್ರಮ ಸಂಖ್ಯೆಗಳನ್ನು ಪ್ರತ್ಯೇಕ ಹಾಳೆಯಲ್ಲಿ ಲಿಪಿಕರಣ ಮಾಡಿದ್ದು, ಸದರಿ ನೋಟುಗಳ ಮೌಲ್ಯ ಮತ್ತು ನೋಟುಗಳ ಸಂಖ್ಯೆ ಪ್ರಾಯೋಗಿಕ ಪಂಚನಾಮೆಯಲ್ಲಿ ಬರೆದ ಮೌಲ್ಯ ಮತ್ತು ಕ್ರಮ ಸಂಖ್ಯೆಗೆ ತಾಳೆಯಾಗಿರುತ್ತವೆ. ಸದರಿ ನೋಟುಗಳನ್ನು ತನಿಖಾಧಿಕಾರಿಯವರು ಪ್ರತ್ಯೇಕವಾಗಿ ವಶಪಡಿಸಿಕೊಂಡಿರುತ್ತಾರೆ.

11) ದೂರುದಾರರಿಗೆ ಪ್ರತ್ಯೇಕ ಶರ್ಟಿನ ವ್ಯವಸ್ಥೆ ಮಾಡಿ, ಎದುರುದಾರರು ಧರಿಸಿದ್ದ ಶರ್ಟನ್ನು ಪಡೆದು ಮುಂಭಾಗದ ಎಡಜೇಬನ್ನು ಹೊರಭಾಗ ಮಾಡಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿದ್ದು, ಸದರಿ ದ್ರಾವಣವನ್ನು ಒಂದು ಗಾಜಿನ ಬಾಟಲ್‌ನಲ್ಲಿ ಶೇಖರಿಸಿ ವಶಪಡಿಸಿಕೊಂಡಿರುತ್ತಾರೆ ಹಾಗೂ ಶರ್ಟನ್ನೂ ಸಹ ಖಾಕಿ ಕವರಿನಲ್ಲಿಟ್ಟು ತನಿಖಾಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ.

12) ಸದರಿ ಮನೆಯಲ್ಲಿ ಕಂಪ್ಯೂಟರ್‌ನಲ್ಲಿ ಮಹಜರ್ ಜರುಗಿಸಲು ಸಮಸ್ಯೆ ಆಗುತ್ತದೆ ಎಂದು ಮುಂದಿನ ಮಹಜರ್ ಕ್ರಮವನ್ನು ಶಿರಾಳಕೊಪ್ಪದ ಪ್ರವಾಸಿ ಮಂದಿರಕ್ಕೆ ಬಂದು ಮೀಟಿಂಗ್ ಹಾಲ್‌ನಲ್ಲಿ ಮಹಜರ್ ಕ್ರಮವನ್ನು ತನಿಖಾಧಿಕಾರಿಗಳು ಮುಂದುವರೆಸಿರುತ್ತಾರೆ. ಎದುರುದಾರರ ಮೇಲಾಧಿಕಾರಿಯವರಾದ ಶ್ರೀ ಆನಂದ ಕುಮಾರ, ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಶಿಕಾರಿಪುರ ಇವರಿಗೆ ದೂರವಾಣಿ ಕರೆ ಮಾಡಿ ಎದುರುದಾರರನ್ನು ಅವರ ವಾಸದ ಮನೆಯಲ್ಲಿ ಲಂಚದ ಹಣ ಸ್ವೀಕರಿಸುವಾಗ ಭ್ರಷ್ಟಾಚಾರ ನಿಗ್ರಹ ದಳ ಕಾಯ್ದೆಯಡಿ ದಸ್ತಗಿರಿ ಮಾಡಲಾಗಿದೆ ಎಂದು ತಿಳಿಸಿ ಅವರನ್ನು ಬರಮಾಡಿಕೊಂಡು ನಡೆದ ಸಂಗತಿಯನ್ನೆಲ್ಲ ವಿವರಿಸಿ ದೂರುದಾರ ಮತ್ತು ಎದುರುದಾರರ ಮಧ್ಯೆ ದೂರು ನೀಡುವ ಪೂರ್ವದಲ್ಲಿ ನಡೆದ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿದ್ದು ಸದರಿ ಸಂಭಾಷಣೆಯನ್ನು ಅವರಿಗೆ ಕೇಳಿಸಲಾಗಿ ಅದರಲ್ಲಿಯ ಒಂದು ಧ್ವನಿ ಎದುರುದಾರರ ಧ್ವನಿಯಾಗಿರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ.

13) ಟ್ರ್ಯಾಪ್ ಕಾಲದಲ್ಲಿ ದೂರುದಾರ ಮತ್ತು ಎದುರುದಾರರ ಮಧ್ಯೆ ನಡೆದ ಸಂಭಾಷಣೆಯನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ್ದು ಅದನ್ನು ಕಂಪ್ಯೂಟರಿಗೆ ಹಾಕಿಸಿ ಕೇಳಿಸಿರುತ್ತಾರೆ ಹಾಗೂ ಸದರಿ ಸಂಭಾಷಣೆಯನ್ನು ಲಿಪಿಕರಣ ಮಾಡಿ ಎರಡು ಸಿ.ಡಿ.ಗಳಿಗೆ ವರ್ಗಾಯಿಸಿ ವಶಪಡಿಸಿಕೊಂಡಿರುತ್ತಾರೆ. ಸದರಿ ಸಂಭಾಷಣೆಯಲ್ಲಿ ಎದುರುದಾರರ ಧ್ವನಿಯನ್ನು ಅವರ ಮೇಲಾಧಿಕಾರಿಗಳಾದ ಶ್ರೀ ಆನಂದಕುಮಾರ್, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಶಿಕಾರಿಪುರ ಇವರು ಗುರ್ತಿಸಿರುತ್ತಾರೆ.

14) ಈ ಬಗ್ಗೆ ಎದುರುದಾರರಿಗೆ ತಮ್ಮ ಸಮಜಾಯಿಷಿ ಬರೆದುಕೊಡುವಂತೆ ತನಿಖಾಧಿಕಾರಿಗಳು ಸೂಚಿಸಿದ್ದರ ಮೇರೆಗೆ ಎದುರುದಾರರು ತಮ್ಮ ಹಸ್ತಾಕ್ಷರಗಳಲ್ಲಿ ಸಮಜಾಯಿಷಿಯನ್ನು ನೀಡಿದ್ದು ಅದರಲ್ಲಿ "ವೀರೇಶ್‌ರವರು ನನಗೆ ಬೇಡವಾದವರ ಮಾತು ಕೇಳಿ ನನ್ನ ಮೇಲೆ ವಿರೋಧವಿರುವುದರಿಂದ ನನ್ನನ್ನು ವಿನಾಕಾರಣ ನಮಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಈ ಕೆಲಸವನ್ನು ಮಾಡಿರುತ್ತಾರೆ. ನಾವು ಈವರೆಗೂ ಯಾರಿಗೂ ಡಿಮಾಂಡ್ ಆಗಲೀ, ತೊಂದರೆಯಾಗಲೀ ಮಾಡಿರುವುದಿಲ್ಲ" ಎಂದು ಸಮಜಾಯಿಷಿ ನೀಡಿರುತ್ತಾರೆ. ಈ ಬಗ್ಗೆ ದೂರುದಾರರಿಗೆ ಮತ್ತು ನೆರಳು ಸಾಕ್ಷಿರವರಿಗೆ ವಿಚಾರಿಸಲಾಗಿ ಎದುರುದಾರರು ನೀಡಿದ ಸಮಜಾಯಿಷಿಯನ್ನು ಒಪ್ಪಿರುವುದಿಲ್ಲ.

15) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಎದುರುದಾರರ ಮೇಲಾಧಿಕಾರಿಯಾದ ಶ್ರೀ ಆನಂದಕುಮಾರ್ ರವರಿಂದ ಮೂಲ ದಾಖಲಾತಿಗಳನ್ನು ಪಡೆದು ಪರಿಶೀಲಿಸಿ ನಕಲು ಪ್ರತಿಗಳನ್ನು ತಯಾರಿಸಿ ಅವುಗಳನ್ನು ಸದರಿಯವರಿಂದ ದೃಢೀಕರಿಸಿ ವಶಪಡಿಸಿಕೊಂಡಿರುತ್ತಾರೆ. ಈ ಎಲ್ಲಾ ನಡವಳಿಕೆಗಳ ಬಗ್ಗೆ ಫೋಟೋಗಳನ್ನು ಪ್ರತ್ಯೇಕವಾಗಿ ತೆಗೆದು ವಶಕ್ಕೆ ಪಡೆದಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪಂಚನಾಮೆಯನ್ನು ರಾತ್ರಿ 10-30ಕ್ಕೆ ಮುಕ್ತಾಯಗೊಳಿಸಿರುತ್ತಾರೆ.

16) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

17) ಧ್ವನಿ ವಿಶ್ಲೇಷಣಾ ವರದಿ ಬರುವುದು ಬಾಕಿ ಇರುತ್ತದೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಫ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

18) ಎದುರುದಾರರಿಗೆ ದಿನಾಂಕ 16/09/2021 ರಂದು ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿದ್ದು ಅದಕ್ಕೆ ಸದರಿಯವರು ತಮ್ಮ ಸಮಜಾಯಿಷಿಯನ್ನು ಸಾಕಷ್ಟು ಕಾಲಾವಕಾಶ ನೀಡಿದರೂ ಯಾವುದೇ ಸಮಜಾಯಿಷಿಯನ್ನು ಸಲ್ಲಿಸಿರುವುದಿಲ್ಲ. ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ನೀಡದೇ ಇರುವುದೂ ಕೂಡ ಅವರ ಕರ್ತವ್ಯ ಲೋಪವನ್ನು ಎತ್ತಿ ತೋರಿಸುತ್ತದೆ. ಈ ಎಲ್ಲಾ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

19) ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ ಎದುರುದಾರರು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೇ, ಕರ್ತವ್ಯ ಶ್ರದ್ಧೆಯನ್ನು ಹೊಂದಿರದೇ, ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಸಾರ್ವಜನಿಕ ಸೇವಕನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಅಪರಾಧಿತ ನಂಬಿಕೆ ದ್ರೋಹವನ್ನು ಎಸಗಿ ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಅಧಿಕಾರ ದುರುಪಯೋಗ ಮಾಡಿ ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993 ಕಲಂ 43–ಎ (1) (i) ರನ್ವಯ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಈ ಕಾರಣದಿಂದಲೇ ಎದುರುದಾರರನ್ನು ನರಸಾಪುರ ಗ್ರಾಮ ಪಂಚಾಯ್ತಿ ಅಧ್ಯಕ್ಷರು, ತಾಲ್ಲೂಕು ಮತ್ತು ಜಿಲ್ಲೆ ಶಿವಮೊಗ್ಗ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43–ಎ(2)ರನ್ವಯ, ಪಂಚಾಯ್ತಿಯ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸದಸ್ಯರನ್ನು ದುರ್ನಡತೆಯ ಆಧಾರದಲ್ಲಿ ಸದಸ್ಯತ್ವದಿಂದ ತೆಗೆದು ಹಾಕಿದಲ್ಲಿ ಅಂತಹ ವ್ಯಕ್ತಿಯನ್ನು ಮುಂದಿನ 6 ವರ್ಷಗಳ ಅವಧಿಗೆ ಪಂಚಾಯತ್ ಸದಸ್ಯತ್ವ ಸ್ಥಾನಕ್ಕೆ ಸ್ಪರ್ಧಿಸಲು ಅನರ್ಹಗೊಳಿಸಬಹುದಾಗಿದೆ.

20) ಆದುದರಿಂದ ಎದುರುದಾರರ ಮೇಲೆ ವಿಚಾರಣೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವೆಂದು ಕಂಡುಬರುತ್ತದೆ.

21) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43–ಎ (1) (i) ರನ್ವಯ ಎದುರುದಾರರು ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ,

ಭ್ರಷ್ಟಾಚಾರವೆಸಗಿ, ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ ಕಾರಣ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43-ಎ (2) ರನ್ವಯ ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲು ಈ ಮೂಲಕ ಶಿಫಾರಸು ಮಾಡಲಾಗಿದೆ.

22) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

12/1/23

**(ನ್ಯಾಯಮೂರ್ತಿ ಬಿ. ಎಸ್. ಪಾಟೀಲ್)**
ಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.